ರಾಸಾಯನಿಕ ಗೊಬ್ಬರಗಳ ಬೆಲೆ ಏರಿಕೆ

347 (891): ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯಾದ್ಯಂತ ಕೃಷಿ ಉತ್ಪನ್ನಗಳ ಬೆಲೆ ಗಣನೀಯವಾಗಿ ಕುಸಿಯುತ್ತಿದ್ದು, ಆದರೆ ರಾಸಾಯನಿಕ ಗೊಬ್ಬರಗಳ ಬೆಲೆ ಅಧಿಕವಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ ?

ಆ) ಹಾಗಿದ್ದಲ್ಲಿ ರಾಸಾಯನಿಕ ಗೊಬ್ಬರದ ಅಧಿಕ ಬೆಲೆಗಳನ್ನೂ ತಗ್ಗಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):

ಅ) ತಿಳಿದಿದೆ.

ಆ) ಬೆಲೆ ಹೆಚ್ಚಿರುವ ರಂಜಕ, ಪೊಟ್ಯಾಷ್ ಮತ್ತು ಕಾಂಪ್ಲೆಕ್ಸ್ ರಸಗೊಬ್ಬರಗಳನ್ನು ರಿಯಾಯಿತಿ ದರದಲ್ಲಿ, ರೈತರಿಗೆ ಸರಬರಾಜು ಮಾಡುವ ಯೋಜನೆಯನ್ನು ಜಾರಿಗೊಳಿಸಲಾಗಿದೆ.

ರಾಜ್ಯದಲ್ಲಿ ತೋಟಗಾರಿಕೆಯನ್ನು ಅಭಿವೃದ್ಧಿಪಡಿಸಲು ತೆಗೆದುಕೊಂಡ ಕ್ರಮುಗಳು

348 (660): ಶ್ರೀ ಶಿವಾನಂದ ಎಸ್. ಕೌಜಲಗಿ (ಬೈಲಹೊಂಗಲ)

ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿಯನ್ನು ಮಹಾರಾಷ್ಟ್ರದ ಮಾದರಿಯಲ್ಲಿ ಹೆಚ್ಚಿಗೆ ಅಭಿವೃದ್ಧಿ ಆಗುವಂತೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಆ) ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಮಂದಗತಿಯಿಂದ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹೌಗಿದ್ದಲ್ಲಿ ಅಭಿವೃದ್ಧಿಪಡಿಸಲು ಯಾವ ಯಾವ ಕ್ರಮವನ್ನು ಸರ್ಕಾರದವರು ಹಾಕಿಕೊಂಡಿರುವರು ?

ಈ) ಮಹಾರಾಷ್ಟ್ರದಲ್ಲಿ ತೋಟಗಾರಿಕೆ ಇಲಾಖೆಯವರು ರೈತರಿಗೆ ಕೊಡುತ್ತಿರುವ ಸವಲತ್ತುಗಳನ್ನು ಕರ್ನಾಟಕದಲ್ಲಿಯೂ ಕೂಡ ತೋಟಗಾರಿಕೆ ಅಭಿವೃದ್ಧಿ ದೃಷ್ಟಿಯಿಂದ ಕೊಡಲು ಯೋಚಿಸುವರೇ ?

ಉ) ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಇಲಾಖೆಯ ಕೆಲಸಗಳು ಮಂದಗತಿಯಿಂದ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಮತ್ತು ಎಷ್ಟು ಹಣ ಖರ್ಚಾಗಿರುವುದು ?

ಊ) ಹಾಗಿದ್ದಲ್ಲಿ ಇಲ್ಲಿ ಹೆಚ್ಚಿಗೆ ಅಭಿವೃದ್ಧಿಪಡಿಸಲು ಯಾವ ಯಾವ ಕ್ರಮಗಳನ್ನು ಹಾಕಿಕೊಳ್ಳಲಾಗಿದೆ ?

ಋ) ಬೆಳಗಾವಿ ಜಿಲ್ಲೆಯಲ್ಲಿ ತೋಟಗಾರಿಕೆ ಅಭಿವೃದ್ಧಿಗಾಗಿ ಎಷ್ಟು ಹಣವನ್ನು ಈ ವರ್ಷ ಒದಗಿಸಲಾಗಿದೆ ? ಮತ್ತು ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು ?

ಋೂ) ತೋಟಗಾರಿಕೆ ಅಭಿವೃದ್ಧಿಗಾಗಿ ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಹಣವನ್ನು ವೆಸ್ಟರ್ನ್ ಘಾಟಿನಲ್ಲಿ (ಮಲೆನಾಡ ಅಭಿವೃದ್ಧಿ) ಯೋಜನೆಯಲ್ಲಿ ಒದಗಿಸಲಾಗಿದೆ.